ಓ.ಎಸ್.151/2025,                    ಪಿ.ಡಬ್ಲ್ಯೂ.1        ಹೆಸರುಃ ಕಿರಣ್

**<u>ದಿಃ24-02-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಎಂ.ಬಿ.ಎ. ವಕೀಲರಿಂದಃ</u>**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಪ್ರತಿವಾದಿಯು ನಮ್ಮ ಬ್ಯಾಂಕಿಗೆ ಸಾಲವನ್ನು ಪಡೆಯುವ ಸಲುವಾಗಿ ನೀಡಿದಂತಹ ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ನಿಪಿ-1 ಎಂದು ಗುರುತಿಸಲಾಯಿತು.

ಅಪ್ರೈಸರ್ ವರದಿಯನ್ನು ಹಾಜರುಪಡಿಸಿದ್ದು ನಿಪಿ.2 ಎಂದು ಗುರುತಿಸಲಾಯಿತು. ಅರೇಂಜ್‌ಮೆಂಟ್ ಲೆಟರ್‌ನ್ನು ಹಾಜರುಪಡಿಸಿದ್ದು ನಿಪಿ.3 ಎಂದು ಗುರುತಿಸಲಾಯಿತು. ಸಾಲದ ಕರಾರು ಪತ್ರವನ್ನು ಹಾಜರುಪಡಿಸಿದ್ದು ನಿಪಿ.4 ಎಂದು ಗುರುತಿಸಲಾಯಿತು. ವರದಿಯನ್ನು ಹಾಜರುಪಡಿಸಿದ್ದು ನಿಪಿ.5 ಎಂದು ಗುರುತಿಸಲಾಯಿತು. ನಮ್ಮ ಬ್ಯಾಂಕಿನವರು ಪ್ರತಿವಾದಿಗೆ ನೀಡಿರುವ ನೋಟೀಸುಗಳು ಮತ್ತು ಅಂಚೆ ಸ್ವೀಕೃತಿ ಹಿಂಬರಹ ಮತ್ತು ಲಕೋಟೆಗಳನ್ನು ಹಾಜರುಪಡಿಸಿದ್ದು ನಿಪಿ.6 ಮತ್ತು 7 ಎಂದು, 6(ಎ) ಮತ್ತು 6(ಬಿ), 7(ಎ), 7(ಬಿ) ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮೂಲಕ ನೀಡಿರುವ ಕಾನೂನು ತಿಳುವಳಿಕೆ ನೋಟೀಸುಗಳನ್ನು ಹಾಜರುಪಡಿಸಿದ್ದು ನಿಪಿ.8 ಮತ್ತು 9 ಎಂದು ಗುರುತಿಸಲಾಯಿತು. ಅಂಚೆ ರಸೀದಿಗಳನ್ನು ನಿಪಿ.8(ಎ) ಮತ್ತು 8(ಬಿ) ಎಂದು ಗುರುತಿಸಲಾಯಿತು.

ಪ್ರತಿವಾದಿಗೆ ಸಂಬಂಧಿಸಿದ ಸಾಲದ ಎಕ್ಸ್‌ಟ್ರಾಕ್ಟ್‌ನ್ನು ಹಾಜರುಪಡಿಸಿದ್ದು ನಿಪಿ-10 ಎಂದು ಗುರುತಿಸಲಾಯಿತು.

**<u>ಪ್ರತಿವಾದಿ ಮತ್ತು ಪ್ರತಿವಾದಿಯ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ